ಹುನಗಂದ ತಾಲ್ಲೂಕಿನ ಕಮತಗಿ ಗ್ರಾಮದಲ್ಲಿ ಪೋಲೀಸ್ ಔಟ್ ಪೋಸ್ಟ್ ಬಗ್ಗೆ

೧೫೪೭. ಶ್ರೀ ಎಸ್. ಜಿ. ನಂಜಯ್ಯನಮಠ (ಗುಳೇದಗುಡ್ಡ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕಮತಗಿ ಗ್ರಾಮದಲ್ಲಿ ಪೋಲೀಸ್ ಔಟ್ ಪೋಸ್ಟ್ ಮಂಜೂರಿಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಈ ವರ್ಷ ಈ ಪೊಲೀಸ್ ಔಟ್‌ಪೋಸ್ಟನ್ನು ಮಂಜೂರು ಮಾಡಲು ಸರ್ಕಾರ ದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಮಂತ್ರಿಗಳು).—

ಅ) ಹೌದು.

ಆ) ಆರ್ಥಿಕ ಅನುಕೂಲತೆಯ ಆಧಾರದ ಮೇಲೆ ಪರಿಗಣಿಸಲಾಗುವುದು.

ಕ್ಯಾನ್ಸರ್ ಹಾಗೂ ಕುಷ್ಠರೋಗ ವ್ಯಾಧಿಯಿಂದ ಬಳಲುತ್ತಿರುವ ಜನರ ಬಗ್ಗೆ

೧೬೨೦ (ಬಿ) ಶ್ರೀ ಮುಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕ್ಯಾನ್ಸರ್ ವ್ಯಾಧಿಯಿಂದ ಬಳಲುತ್ತಿರುವ ರೋಗಿಗಳ ಒಟ್ಟಾರೆ ಸಂಖ್ಯೆ ಎಷ್ಟು? (ಪುರುಷ ಹಾಗೂ ಮಹಿಳೆಯರ, ಮಕ್ಕಳ ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)

ಆ) ಕ್ಯಾನ್ಸರ್ ವ್ಯಾಧಿಯಿಂದ ಬಳಲುತ್ತಿರುವ ರೋಗಿಗಳಿಗೆ ಸರ್ಕಾರದಿಂದ ಯಾವ ರೀತಿಯ ಸಹಾಯ ನೀಡಲಾಗುತ್ತಿದೆ ?

ಇ) ಕ್ಯಾನ್ಸರ್ ರೋಗ ಪೀಡಿತರಿಗೆ ಬಸ್ ಪಾಸ್ ಅಥವಾ ರೈಲುಪಾಸ್ ಕೊಡುವುದರಲ್ಲಿ ಸರ್ಕಾರದವರ ನಿಲುವೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಆಬ್ಕಾರಿ ಸಚಿವರು).—

ಅ) ಕ್ಯಾನ್ಸರ್ ವ್ಯಾಧಿಯಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಈ ಕೆಳಕಂಡಂತಿದೆ.—

ಪುರುಷರು	೧೨೪೧೨
ಮಹಿಳೆಯರು	೧೫೯೨೪
ಮಕ್ಕಳು	೩೬೪
ಒಟ್ಟು	೨೯,೦೨೦

ಆ) ಬೆಂಗಳೂರಿನಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಸ್ಥಾಪಿಸಿ ಅದರಲ್ಲಿ ಚಿಕಿತ್ಸೆ ಪಡೆಯಲು ವ್ಯವಸ್ಥೆ ಮಾಡಲಾಗಿದೆ.

ಇ) ಕ್ಯಾನ್ಸರ್ ರೋಗಿಗಳಿಗೆ ರೈಲು ಮತ್ತು ವಿಮಾನದಲ್ಲಿ ಹೋಗಲು ಪ್ರಯಾಣ ದರದಲ್ಲಿ ಶೇಕಡ ೫೦ರಷ್ಟು ರಿಯಾಯಿತಿ ಇದೆ.